ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ವಿಚಾರ ಮಾಡಲಿಲ್ಲ. ಆ ಅರ್ಜಿ ೧೯೭೫ರಲ್ಲಿ ಬಂದಿದೆ. ಯಾವ ಆಧಾರದ ಮೇಲೆ ಅದನ್ನು ವಿಚಾರ ಮಾಡುತ್ತೀರಾ ? ಬೆಳೆ ಬಂದಿದ್ದರೆ ವಾಟರ್ ರೇಟ್ ಹಾಕಬೇಕು. ಇಲ್ಲದಿದ್ದರೆ ಇಲ್ಲವೆಂದು ಹೇಳಿದರೆ ಹೇಗೆ ?

ಶ್ರೀ ಕೆ. ಎಚ್. ಹನುಮೇಗೌಡ.—೧೦ ಎಕರೆಯೊಳಗೆ ಒಳಪಡಬೇಕು. ಒಂದು ಸಾರಿ ಬೆಳೆ ಬರಬೇಕಾದರೆ ಐದಾರು ಸಾರಿ ನೀರು ತುಂಬಬೇಕು. ಬೆಳೆ ಹಾಕಿದ ಮೇಲೆ ಆಲ್ಲಿ ಒಂದು ಹದ ನೀರು ಇಲ್ಲದೇ ಹೋದರೆ ಬೆಳೆ ಹಾಳಾಗಿ ಹೋಗುತ್ತದೆ. ವಿಲೇಜ್ ಅಕೌಂಟೆಂಟ್ ಬೆಳೆ ಬಂದ ಕೂಡಲೇ ಪಹಣಿ ಬರೆಯುತ್ತಾನೆ. ಬೆಳೆಹೋಯಿತೆಂದು ಅಸಿಸ್ಟೆಂಟ್ ಕಮಿಷನರ್ ಅವರಿಗೆ ಹಾಗೂ ಡೆಪ್ಯುಟಿ ಕಮಿಷನರ್ ಅವರಿಗೆ ಒಂದು ಅರ್ಜಿ ಕೊಟ್ಟರೆ ಕಾನೂನು ಪ್ರಕಾರ ಇಬ್ಬರನ್ನೂ ಒಟ್ಟಿಗೆ ಸೇರಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡದೆ ಸೇರಿಸುವುದಕ್ಕಾಗಲಿಲ್ಲ ಬಹಳ ಕೆಲಸಗಳು ಇವೆಯೆಂದು ಹೇಳುತ್ತಾರೆ. ಇವರಿಂದ ಆಗಬಾರದ ಅನ್ಯಾಯ ಆಗುತ್ತದೆ.ಆದ್ದರಿಂದ ಅದಕ್ಕಾಗಿ ಒಂದು ಟೈಂ ನಿಗದಿಮಾಡಿ. ಸಂಬಂಧಪಟ್ಟ ರೈತರು ಅಪ್ಲಿಕೇಷನ್ ಕೊಟ್ಟರೆ ಅದನ್ನು ಮೂರು ತಿಂಗಳ ಮೇಲೆ ಇಟ್ಟುಕೊಳ್ಳಬಾರದು, ಇಬ್ಬರೂ ಎರಡು ವರ್ಷಗಳು, ಆದಮೇಲೆ ಮನೆ ಮಾರಿಕೊಂಡು ಅಧಿಕಾರಿಗಳ ಜೊತೆಯಲ್ಲಿ ಕ್ರಾಸ್ ಎಗ್ಜಾಮಿನೇಷನ್ನಿಗೆ ಹೋಗುತ್ತಾರೆ. ಒಂದೊಂದು ಸಾರಿ ರೇಗುತ್ತಾರೆಂದು ಹೇಳುತ್ತೇನೆ. ಈ ಸನ್ನಿವೇಶ ನೋಡಿದಾಗ ಅದು ಹಾಗೆಯೇ ಆಗುತ್ತದೆಂದು ಹೇಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ —ಕೆರೆಗಳ ಕೆಳಗೆ ಅಚ್ಚುಕಟ್ಟು ಇರುತ್ತದೆ. ಬಾವಿ ಇಲ್ಲದೆ ಬೆಳೆ ಮಾಡಿರುವುದರಿಂದ ಅಲ್ಲಿ ಕೆರೆಯ ನೀರನ್ನು ಉಪಯೋಗಿಸುವುದಿಲ್ಲ. ಅಂಥಾದ್ದಕ್ಕೆ ವಾಟರ್ ರೇಟ್ ಹಾಕುತ್ತಾರೆ. ಇದರ ಬಗ್ಗೆ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾನೂನಿಗೆ ವಿರೋಧವಾಗಿ ಮಾಡಿ ಎಂದು ನಾನು ಯಾರಿಗೂ ಯಾವ ಅಧಿಕಾರಿಗೂ ಹೇಳುವುದಕ್ಕಾಗುವುದಿಲ್ಲ. ಅವರು ಮಾಡುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಮಾಡಬೇಕು. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಮೂರು ಇನ್‌ಗ್ರಿಡಿಯಂಟ್ಸ್ ಸೇರಿಸಿದರೂ ಕೂಡ ಬೆಳೆಯಾಗದೇ ಇರುವ ಸಂದರ್ಭವೂ ಉಂಟು ಈ ಮೂರೂ ಸಹ ಪರಿಪೂರ್ಣವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ ಅಂತಹ ಸಂದರ್ಭದಲ್ಲಿ ಜನರಲ್ ಇನ್‌ಸ್ಪೆಕ್ಷನ್ ಮಾಡಿ ಎಂಬುದಾಗಿ ಹೇಳಿದರೆ ಅದರ ಪ್ರಕಾರ ಅವರು ಮಾಡಬೇಕು. ವಾಟರ್‌ರೇಟ್ ಹಾಕಿರುವುದು ತಪ್ಪು ಎಂಬುದಾಗಿ ಹೇಳುವುದು ಸರಿಯಲ್ಲ ಅಪೀಲುಗಳಿದ್ದರೆ ಅಂತಹ ಕೇಸುಗಳನ್ನು ಅವರು ತೀರ್ಮಾನಮಾಡಬಹುದು. ಈಗ ೯ ವರ್ಷಗಳಾಗಿವೆ ಅಂತಹ ಕೇಸುಗಳು ಜಾಸ್ತಿ ಇದ್ದರೆ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಿ ಬೇಗ ಅಪೀಲು ಕೇಸುಗಳು ತೀರ್ಮಾನಮಾಡುವುದಕ್ಕೆ ವ್ಯವಸ್ಥೆಮಾಡುತ್ತೇನೆ.

Illegal allotment of Land at Shikaripur

ಶ್ರೀ ಕೆ. ಯಂಕಟಪ್ಪ.—ನಾನು ಈವೇ ತಾರೀಖಿನಲ್ಲಿ ಒಂದು ನೋಟೀಸ್ ಕೊಟ್ಟಿದ್ದೇನೆ. ಒಂದು ಲ್ಯಾಂಡ್ ದರಖಾಸ್ತಿನಲ್ಲಿ ಇಲ್ಲೀಗಲ್ ಆಗಿದೆ. ೩೦-೪-೧೯೭೪ರಲ್ಲಿ ಶಿಕಾರಿಪುರದಲ್ಲಿ ಆ ರೀತಿ ಜಮೀನು ಕೊಟ್ಟಿದ್ದಾರೆ. ಅದು ಸರಿಯಲ್ಲ. ನಾನು ಅದರ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ: ಅದರ ಬಗ್ಗೆ ಮಂತ್ರಿಗಳು ಸ್ಟೇಟುಮೆಂಟು ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದ್ದಕ್ಕಿದ್ದ ಹಾಗೆ ಇದೇನಾಯಿತು ಅದೇನಾಯಿತು ಎಂದು ಕೇಳಿದರೆ ನಾನು ಉತ್ತರ ಹೇಳುವುದಕ್ಕಾಗುವುದಿಲ್ಲ. ಅದೇನೆಂದು ತಿಳಿದು ಉತ್ತರವನ್ನು ಹೇಳಬೇಕಾಗುತ್ತದೆ.

ಶ್ರೀ ಕೆ. ಯಂಕಟಪ್ಪ —ನಾನು ಅದರ ಬಗ್ಗೆ ಪ್ರಶ್ನೆಯನ್ನೂ ಸಹ ಕೊಟ್ಟಿದ್ದೇನೆ. ನೋಟೀಸ್ ಕೊಟ್ಟಿದ್ದೇನೆ. ಸೆಕ್ರೆಟೇರಿಯಟ್ಟಿನವರು ನಿಮ್ಮ ಲೆಜಿಸ್ಲೇಚರ್ ಸೆಕ್ರೆಟೇರಿಯಟ್ಟಿಗೆ ತಿಳಿಸಿದ್ದಾರೆ. ಆದರೂ ಕೂಡ ಅರ್ಜಿ ಹಾಕಿದವರಿಗೇ. ಜಮೀನು ಇರುವವರಿಗೇನೇ ಜಮೀನು ಕೊಟ್ಟರೆ ಅದರ ಉದ್ದೇಶವೇನು?

ಅಧ್ಯಕ್ಷರು.—ಅವರ ಸೆಕ್ರೆಟೇರಿಯಟ್‌ನಿಂದ ನಮಗೆ ಕಾಗದ ಬಂದಿದೆ. ಅವರು ಇನ್ನೂ ಸ್ವಲ್ಪ ಹೆಚ್ಚು ಕಾಲ ಕೇಳಿದ್ದಾರೆ.

ಶ್ರೀ ಕೆ. ಯಂಕಟಪ್ಪ —ಟೈಂ ಕೇಳಿದ ಮೇಲೆ ಕೊಡಬೇಕು. ರೂಲ್ಸ್ ಪ್ರಕಾರ ಮಾಡಬೇಕಾಗುತ್ತದೆ ನಾನು ಅಸೆಂಬ್ಲಿ ಪ್ರಾರಂಭವಾಗುವುದಕ್ಕೆ ಮುಂಚೆ ಪ್ರಶ್ನೆ ಕೊಟ್ಟಿದ್ದೇನೆ. ಒಂದು ತಿಂಗಳ ಕಾಲ ಬೇಕೆಂದು ಕೇಳಿದ್ದಾರೆ. ಒಂದು ತಿಂಗಳಾದ ಮೇಲೆ ಇನ್ನೂ ಉತ್ತರ ಬರಲಿಲ್ಲ. ಮತ್ತೆ ವೇಳೆ ಬೇಕೆಂದು ಹೇಳಿದರೆ ಹೇಗೆ ? ೩೦-೬-೧೯೭೭ರಲ್ಲಿ ಲ್ಯಾಂಡ್ ಗ್ರಾಂಟ್ ಆಗಿರುವುದು ಇಲ್ಲೀಗಲ್ಲಾಗಿದೆ. ರೀಸೆಂಟಾಗಿ ೧೦ ವರ್ಷಗಳ ಮೇಲೆ ಅವರ ಮಕ್ಕಳಿಗೆ ಗ್ರಾಂಟ್ ಆಗಿದೆ. ದಯವಾಡಿ ಇದರ ವಿಷಯದಲ್ಲಿ ಕೂಡಲೇ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನಂ ಇರತಕ್ಕವರಿಗೆ ಜಮೀನು ಕೊಟ್ಟಿದ್ದಾರೆಂದು ಹೇಳಿದರೆ ನಾನಂ ಕೂಡಲೇ ಸ್ಪಷ್ಟವಾಗಿ ವಿಚಾರಮಾಡುತ್ತೇನೆ ಜಮೀನು ಇರತಕ್ಕವರಿಗೆ ಕೊಟ್ಟಿದ್ದರೆ ಅದನ್ನೂ ವಜಾ ಮಾಡಬೇಕೆಂದಂ ಸ್ಪಷ್ಟವಾಗಿ ಬರೆಯುತ್ತೇನೆ. ಅದಂ ರೂಲಿಗೆ ವಿರೋಧವಾಗುತ್ತದೆ.

ಶ್ರೀ ಕೆ. ಯಂಕಟಪ್ಪ.—ಮಕ್ಕಳ ಹೆಸರಿಗೆ ಕೊಟ್ಟಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದು ಕುಟುಂಬ ಏನಿದೆಯೋ ಅದರಲ್ಲಿ ಆ ರೀತಿ ಮಾಡಿದ್ದರೆ ಅನು ಕಾನೂನಿಗೆ ವಿರುದ್ಧವಾಗಿದೆಯೆಂದಂ ನಾನು ಸ್ಪಷ್ಟವಾಗಿ ತಿಳಿಸುತ್ತೇನೆ. ಈಗ ಸಫಿಷಿಯೆಂಟ್ ಹೋಲ್ಡರ್ ಯಾರು ಎಂದು ಡೆಫಿನಿಷನ್ ಇದೆ. ಆದ್ದರಿಂದ ಅಂತಹವರಿಗೆ ಕೊಡುವುದಕ್ಕಾಗುವುದಿಲ್ಲ. ಒಂದು ಪಕ್ಷ ಆ ರೀತಿ ಕೊಟ್ಟಿರುವುದು ನಿಜವಾದರೆ ದಾಖಲೆಯನ್ನು ಅವರಿಂದ ತರಿಸಿಕೊಂಡು ಉತ್ತರ ಹೇಳಬೇಕು. ಆದಕ್ಕೋಸ್ಕರ ಕಾಲ ಕೇಳಿದ್ದಾರೆ. ಒಂದು ವೇಳೆ ನಿಜವಾಗಿದ್ದರೆ ಡೆಪ್ಯುಟಿ ಕಮಿಷನರಿಗೆ ಕಾಂಟ್ಯಾಕ್ಟ್ ಮಾಡಿದ ಪ್ರಕಾರ ಅಸಿಸ್ಟೆಂಟ್ ಕಮಿಷನರ್ ಕೂಡಲೇ ಹೋಗಿ ತಹಸೀಲ್ದಾರರ ಹತ್ತಿರ ವಿಷಯಗಳನ್ನು ಸಂಗ್ರಹಿಸಿ ತಿಳಿಸಬೇಕೆಂದು ಬರೆದಿದ್ದೇನೆ ಇನ್ನೂ ಸಿಕ್ಕದೇ ಇರುವ ದಾಖಲೆಗಳನ್ನೂ ಸಹ ಕೇಳಿದ್ದೇನೆ. ಆ ದಾಖಲೆಗಳು ಬೇಕಾದರೆ ಸ್ವಲ್ಪ ಕಾಲ ಬೇಕೆಂದು ನನ್ನನ್ನು ಕೇಳಿದರು. ಆಗ ಬಹುದೆಂದು ಬರೆದಿದ್ದೇನೆ. ನಾಳೆ ಅದನ್ನು ತರಿಸುವುದಕ್ಕೆ ಅನುಕೂಲವಾದರೆ ಕೊಡುತ್ತೇನೆ. ಎಲ್ಲಾ ಅಂಶಗಳಿಗೂ ಉತ್ತರ ಬೇಕಾದರೆ ಕಾಲಾವಕಾಶ ಬೇಕೆಂದು ಕೇಳಿದರೆ, ನನ್ನ ಮನಸ್ಸಿಗೆ ಖಚಿತವಾದರೆ ಕಾಲಾವಕಾಶ ಕೊಡಬೇಕಾಗುತ್ತದೆ.

Notice of question of Privilege

re : incorrect replies by the Minister for Agriculture and Animal Husbandry about prices of fertilisers

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).— ಮಾನ್ಯ ಸಭಾಧ್ಯಕ್ಷಣಿಯಂವರೇ, ವ್ಯವಸಾಯ ಮಂತ್ರಿಗಳು ೧೬-೮-೧೯೭೪ರಂದು ಮಾನ್ಯ ಶ್ರೀ ಕೆ. ಎಚ್. ಹನುಮೇಗೌಡರವರಿಗೆ ಉತ್ತರ ಕೊಡುವ ಕಾಲದಲ್ಲಿ ಸಭೆಗೆ ಸರಿಯಾದಂಥ ಉತ್ತರ ಕೊಡದೆ ಈ ಸಭೆಯ ಹಕ್ಕಿಗೆ ಚ್ಯುತಿಯನ್ನು ತಂದಿದ್ದಾರೆ. ಈ ಬಗ್ಗೆ ಹಕ್ಕು ಸೂಚನೆಯನ್ನು ಮಂಡಿಸುವುದಕ್ಕೆ ಅಪ್ಪಣೆ ಕೇಳಿದ್ದೇವೆ. ೧೬-೮-೧೯೭೪ಕ್ಕಿಂತ ಮುಂಚೆ ರಾಜ್ಯ ಸರ್ಕಾರದವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಹಳೇ ದರದಲ್ಲಿ ಶೇಖರಣೆ ಮಾಡಿದಂಥ ಗೊಬ್ಬರವನ್ನು ವಿತರಣೆ ಮಾಡುವಾಗ ಕೇಂದ್ರ ಸರ್ಕಾರದವರು ಹೊಸ ದಾಗಿ ನಿಗದಿ ಮಾಡಿದಂಥ ಸೀಲಿಂಗ್ ಪ್ರೈಸ್‌ನ ಮೇಲೆ ಮಾರಾಟಮಾಡಲು ಕೇಂದ್ರ ಸರ್ಕಾರದಿಂದ ನಿರ್ದೇಶನವನ್ನು ಪಡೆದು ಮಾಡಿದ್ದೇವೆಂದು ಈ ಸಭೆಯಲ್ಲಿ ಮಂತ್ರಿಗಳು ಸ್ಪಷ್ಟೀಕರಣ ಮಾಡಿದ್ದಾರೆ. ಅದರ ಬಗ್ಗೆ ಮಾರನೇ ದಿವಸ ಚರ್ಚೆ ಮಾಡಿದಾಗ, ಅದರಲ್ಲಿಯೂ ನನ್ನ ಪ್ರಶ್ನೆಗೆ ಉತ್ತರ ಕೊಡುವ ಕಾಲ ದಲ್ಲಿ ಅದನ್ನು ಪ್ರಸ್ತಾಪನೆ ಮಾಡಿದ್ದಾರೆ.

11-30 A. M.

I would like to quote some portion of the reply given by the Hon. Minister on 16th August 1974. I will read from the Official Report of the Sixth Session (Page 297).

ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚಿಕ್ಕೇಗೌಡರು ಕಾಗೋಡು ತಿಮ್ಮಪ್ಪನವರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿರುವ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ ಮಾನ್ಯ ಚಿಕ್ಕೇ ಗೌಡರು ತಪ್ಪು ಉತ್ತರವನ್ನು ಕೊಡತಕ್ಕಂಥವರ ಮುಖೇನ ಈ ಸಭೆಯ ಹಕ್ಕಿಗೆ ಚ್ಯುತಿ ತಂದಿದ್ದಾರೆಂದು ಅದಕ್ಕೆ ಒಂದು ವಿವರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಪಾರ್ಲಿಮೆಂಟಿನಲ್ಲಿ ಉತ್ತರ ಕೊಡ ತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಕರ್ನಾಟಕ ಸರ್ಕಾರ ಹಳೆಯ ದರದಲ್ಲಿ ಕೊಂಡಂಥ ಗೊಬ್ಬರವನ್ನು ಹೊಸ ದರದಲ್ಲಿ ಮಾರಾಟ ಮಾಡುವಾಗ ನಮ್ಮನ್ನು ಕೇಳಲಿಲ್ಲ ಎಂದು...

The Hon. Minister Sri N. Chikke Gowda has stated as follows :—

"A clarification was sought by the State Government in that connection. The Government of India has specifically said that from the date of the order it could be sold at the new ceiling prices."